UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Wednesday
16-09-2026

ವಿಜಯವಾಣಿ ನಂ 1 ಕನ್ನಡ ದಿನಪತ್ರಿಕೆ

ಬೆಂಗಳೂರು ಕೃಷಿ ವಿವಿ ಸಹಯೋಗದಲ್ಲಿ ವಿಜಯವಾಣಿಯಲ್ಲಿ ಪ್ರಶ್ನೋತ್ತರ ಅಂಕಣ | ಐದು ವರ್ಷಗಳ ಸಂಭ್ರಮ

# ಅನ್ನದಾತರ ಸಾವಿರಾರು ಪ್ರಶ್ನೆಗಳಿಗೆ ಉತ್ತರವಾದ ರೈತಮಿತ್ರ



■ಡಾ. ಎಸ್.ವಿ. ಸುರೇಶ

ಕೃಷಿ ನಮ್ಮ ದೇಶದ ಬದುಕು, ಸಂಸ್ಕೃತಿ ಹಾಗೂ ಆರಂಭದ ಸಂಕೇತ. ನಿರಂತರವಾಗಿ ಆಹಾರ ಭದ್ರತೆ ಮತ್ತು ಪೋಷಕಾಂಶ ಭದ್ರತೆ ಕಲ್ಪಿಸುತ್ತಿರುವ ಕೃಷಿಕ ಎಂದಿಗೂ ಅಭಿನಂದನಾರ್ಹ. ಕೃಷಿ ಕೇವಲ ಒಂದು ಕಾಯಕವಲ್ಲ; ಅದು ನಮ್ಮ ರಾಜ್ಯದ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನೊಂದಿಗಿನ ಅವಿನಾಭಾವ ಸಂಬಂಧ. ಅನ್ನದಾತರು ಹಗಲಿರುಳು ಶ್ರಮಿಸಿ ದೇಶದ ಜನತೆಗೆ ಆಹಾರ ಒದಗಿಸುವುದರ ಜತೆಗೆ, ರಾಷ್ಟ್ರದ ಆರ್ಥಿಕ ಪ್ರಗತಿಗೂ ಮಹತ್ವದ ಕೊಡುಗೆ ನೀಡುತ್ತಿದ್ದಾರೆ. ಆದಾಗ್ಯೂ ಬದಲಾಗುತ್ತಿರುವ ಕಾಲಘಟ್ಟದಲ್ಲಿ ಕೃಷಿ ಕ್ಷೇತ್ರ ಹಲವು ಸವಾಲು ಎದುರಿಸುತ್ತಿದೆ. ಹವಾಮಾನ ಬದಲಾವಣೆ, ಅನಿಯಮಿತ ಮಳೆ, ಬರ-ಅತಿವೃಷ್ಟಿ, ಕ್ಷೀಣಿಸುತ್ತಿರುವ ಮಣ್ಣಿನ ಫಲವತ್ತತೆ, ನೀರಿನ ಕೊರತೆ, ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ, ಕಾರ್ಮಿಕರ ಕೊರತೆ, ಕೀಟ ಮತ್ತು ರೋಗಗಳ ಬಾಧೆ ಹಾಗೂ ಕೃಷಿ ಉತ್ಪನ್ನಗಳ ಬೆಲೆ ಏರಿಳಿತಗಳು ರೈತರ ಬದುಕಿನ ಮೇಲೆ ತನ್ನದೇ ಆದ ಪರಿಣಾಮ ಬೀರುತ್ತಿವೆ. ಹಿಂದಿನ ದಿನಗಳಲ್ಲಿ ಕೇವಲ ಉತ್ಪಾದನೆ ಹೆಚ್ಚಿಸುವತ್ತ ಇದ್ದ ಗಮನ ಇಂದು ಹವಾಮಾನ ಚತುರ ಕೃಷಿ, ನಿಖರ ಕೃಷಿ, ಸುಸ್ಥಿರ ಕೃಷಿ ಹಾಗೂ ಲಾಭದಾಯಕ ಕೃಷಿಯತ್ತ ಹರಿಯಬೇಕಾಗಿದೆ. ವೇಗವಾಗಿ ಬೆಳೆಯುತ್ತಿರುವ ಡಿಜಿಟಲ್ ತಂತ್ರಜ್ಞಾನಗಳನ್ನು ಕೃಷಿ ಅಭಿವೃದ್ಧಿಯೊಂದಿಗೆ ಸಮೀಕರಿಸುವ ಅಗತ್ಯವೂ ಇದೆ.

ಇಂತಹ ಸವಾಲುಗಳ ಸಂದರ್ಭದಲ್ಲಿ ರೈತನಿಗೆ ಸರಿಯಾದ ಸಮಯದಲ್ಲಿ ಸರಿಯಾದ ವೈಜ್ಞಾನಿಕ ಮಾಹಿತಿ ದೊರೆಯುವುದು ಅತ್ಯಂತ ಮುಖ್ಯ. ಈ ನಿಟ್ಟಿನಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳು, ಕೃಷಿ ಇಲಾಖೆ ಹಾಗೂ ಅಭಿವೃದ್ಧಿ ಇಲಾಖೆಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ. ಇವರ ಪ್ರಯತ್ನಗಳಿಗೆ ಜನಪ್ರಿಯ ಮಾಧ್ಯಮಗಳು ಕೈಜೋಡಿಸಿದಾಗ ಸಂಶೋಧನೆಯ ಫಲ ಮತ್ತು ತಾಂತ್ರಿಕ ಜ್ಞಾನ ನೇರವಾಗಿ ರೈತರ ಮನೆಬಾಗಿಲಿಗೆ ತಲುಪಲು ಸಾಧ್ಯವಾಗುತ್ತದೆ. ಇದಕ್ಕೆ ನಿದರ್ಶನವೆಂಬಂತೆ ಕನ್ನಡ ನಂ.1 ದಿನಪತ್ರಿಕೆ 'ವಿಜಯವಾಣಿ'ಯ ರೈತಮಿತ್ರ ಪ್ರಶ್ನೋತ್ತರ ಅಂಕಣ.




ಬೆಂಗಳೂರು ವಿಶ್ವವಿದ್ಯಾನಿಲಯದ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದ ಮೂಲಕ 2021ರ ಸೆ.6ರಂದು 'ವಿಜಯವಾಣಿ'ಯಲ್ಲಿ ಆರಂಭವಾದ 'ರೈತಮಿತ್ರ' ಅಂಕಣ, ರೈತ ಕೇಳುವ ಪ್ರಶ್ನೆಗೆ ಕೃಷಿ ವಿಜ್ಞಾನಿಗಳಿಂದ ನಿಖರವಾದ ಉತ್ತರ ಕೊಡಿಸುವುದು ಮತ್ತು ವೈಜ್ಞಾನಿಕ ಮಾಹಿತಿಯನ್ನು ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ತಲುಪಿಸುತ್ತಿದೆ. ಬಿತ್ತನೆ ಬೀಜದ ಆಯ್ಕೆಯಿಂದ ಆರಂಭಿಸಿ ಕೊಯ್ಲಿನ ನಂತರದ ನಿರ್ವಹಣೆಯವರೆಗೆ ರೈತರು ಪ್ರಶ್ನೆಗಳನ್ನು ಕೇಳಿದ್ದಾರೆ. ಯಾವ ತಳಿ ಸೂಕ್ತ? ಯಾವಾಗ ಬಿತ್ತನೆ ಮಾಡಬೇಕು? ಎಷ್ಟು ಗೊಬ್ಬರ ಬಳಸಬೇಕು? ಕೀಟಬಾಧೆ ನಿಯಂತ್ರಿಸುವುದು ಹೇಗೆ? ಮಣ್ಣಿನ ಫಲವತ್ತತೆ ಹೆಚ್ಚಿಸುವುದು ಹೇಗೆ? ನೀರಿನ ಕೊರತೆಯಲ್ಲಿ ಯಾವ ಬೆಳೆ ಆಯ್ಕೆ ಮಾಡಬೇಕು? ಎಂಬ ಸಾಂಪ್ರದಾಯಿಕ ಪ್ರಶ್ನೆಗಳ ಜತೆಗೆ, ಹೊಸ ತಂತ್ರಜ್ಞಾನಗಳ ಬಗ್ಗೆಯೂ ರೈತರ ಆಸಕ್ತಿ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ 'ರೈತಮಿತ್ರ' ಕೃಷಿ ವಿಶ್ವವಿದ್ಯಾನಿಲಯದ ಜ್ಞಾನವನ್ನು ರೈತರ ನೈಜ ಅಗತ್ಯಗಳೊಂದಿಗೆ ಜೋಡಿಸುವ ವೇದಿಕೆಯಾಗಿದೆ. ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಸಂಶೋಧನೆಗಳು, ಅಭಿವೃದ್ಧಿಪಡಿಸಲಾಗುವ ತಂತ್ರಜ್ಞಾನಗಳು ಮತ್ತು ವಿಜ್ಞಾನಿಗಳ ಅನುಭವಗಳು ರೈತನಿಗೆ ಸರಳ ಕನ್ನಡದಲ್ಲಿ ತಲುಪುತ್ತಿವೆ. ಒಬ್ಬ ರೈತನ ಪ್ರಶ್ನೆಗೆ ಉತ್ತರ ನೀಡುವುದು ಎಂದರೆ ಒಂದು ಸಮಸ್ಯೆಗೆ ಪರಿಹಾರ ನೀಡುವುದಷ್ಟೇ ಅಲ್ಲ; ಒಂದು ಕುಟುಂಬದ ಬದುಕಿಗೆ ಭರವಸೆ ನೀಡುವುದು. ಆ ಭರವಸೆಯನ್ನು ಕಳೆದ ಐದು ವರ್ಷಗಳಿಂದ ನಿರಂತರವಾಗಿ ಮೂಡಿಸುತ್ತಿರುವ 'ರೈತಮಿತ್ರ' ಇನ್ನಷ್ಟು ಕೃಷಿಕರನ್ನು ತಲುಪಲಿ, ರೈತರಲ್ಲಿ ಹೊಸ ಆತ್ಮಸ್ಥೈರ್ಯ ತುಂಬಲಿ ಮತ್ತು ಜ್ಞಾನದಿಂದ ಹೊಲದವರೆಗೆ ಸಾಗುವ ಈ ಯಶಸ್ವಿ ಪಯಣ ನಿರಂತರವಾಗಿ ಮುಂದುವರಿಯಲಿ.

(ಲೇಖಕರು-ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು)

**ನಾಳೆ ಐದನೇ ವಾರ್ಷಿಕೋತ್ಸವ**

ಬೆಂಗಳೂರು ಕೃಷಿ ವಿವಿ ಸಹಯೋಗದೊಂದಿಗೆ 'ವಿಜಯವಾಣಿ'ಯಲ್ಲಿ ಪ್ರಕಟವಾಗುವ 'ರೈತಮಿತ್ರ' ಅಂಕಣ ಐದು ವರ್ಷಗಳ ಯಶಸ್ವಿ ಪಯಣವನ್ನು ಪೂರ್ಣಗೊಳಿಸಿದೆ. ಇದುವರೆಗೆ 293 ಕಾಲಂಗಳಲ್ಲಿ 515 ರೈತರ ಸಮಸ್ಯೆಗಳಿಗೆ ಸರಳ ಭಾಷೆಯಲ್ಲಿ ಸೂಕ್ತ ಉತ್ತರ, ಸಲಹೆ ಮತ್ತು ಅಗತ್ಯವಿರುವ ಕಡೆ ಸೂಕ್ತ ಛಾಯಾಚಿತ್ರಗಳೊಂದಿಗೆ ಮಾಹಿತಿಯನ್ನು ಸ್ಪಷ್ಟವಾಗಿ ತಲುಪಿಸಲಾಗಿದೆ. ಪ್ರತಿವರ್ಷವೂ ಪ್ರಶ್ನೋತ್ತರಗಳನ್ನು ಪುಸ್ತಕ ರೂಪದಲ್ಲಿ ಕ್ರೋಡೀಕರಿಸಿ ಹೊರತರಲಾಗುತ್ತಿದೆ. ಈ ವರ್ಷವೂ 'ರೈತಮಿತ್ರ' ಅಂಕಣದ ಐದನೇ ವಾರ್ಷಿಕೋತ್ಸವ ಹಾಗೂ ಮಣ್ಣಿನ ವಿಸ್ಮಯಕಾರಿ ಕೀಟಗಳು' ಕಾರ್ಯಾಗಾರ, ಸೆ.17ರಂದು ನಗರದ ಜಿಕೆವಿಕೆಯಲ್ಲಿನ ನಾರ್ಥ್ ಬ್ಲಾಕ್ ಆಡಿಟೋರಿಯಂನಲ್ಲಿ ನಡೆಯಲಿದೆ. ಕೃಷಿ ಸಚಿವ ಪಿ.ಎಂ.ನರೇಂದ್ರ ಸ್ವಾಮಿ, ಕೃಷಿ ವಿವಿ ಕುಲಪತಿ ಡಾ.ಎಸ್.ವಿ. ಸುರೇಶ, ವಿಜಯವಾಣಿ ಪ್ರಧಾನ ಸಂಪಾದಕ ಕೆ.ಎನ್.ಚನ್ನೇಗೌಡ, ಭಾಗಿಯಾಗಲಿದ್ದಾರೆ.

Bengaluru Edition
Sep 16, 2026 Page No. 13
Powered by: erelego.com